ಹೋಗಬೇಕು, ಸಾಮಾಜಿಕ ಕರಪ್ಷನ್, ಮದ್ಯಪಾನ ಜೂಜು ಇವೆಲ್ಲ ದೂರ ಹೋಗಬೇಕು. ಇದು ಯಾವ ರೀತಿ ಹೋಗಬೇಕು ಎನ್ನುವುದಕ್ಕೆ ತಮ್ಮ ಮುಖಾಂತರ ಸರ್ಕಾರಕ್ಕೆ ಸೂಚನೆ ಕೊಡುವುದಕ್ಕೆ ಬಯಸುತ್ತೇನೆ. ತಾವು ತಂದಿರತಕ್ಕಂಥ ಎಜುಕೇಷನ್ ಬಿಲ್ ಏನು ಇದೆ ಇದರಲ್ಲಿ ನೈತಿಕ ಭಾವನೆ, ಧಾರ್ಮಿಕ ಭಾವನೆ ಬರುವಂತೆ ಇರಬೇಕು. ಸಂಸ್ಕಾರ, ಸಂಸ್ಕೃತಿ ಒಳ್ಳೆಯದಾಗ ಬಂತೆ. ಆದನ್ನು ಆಚರಣೆಗೆ ತರಬೇಕು. ಸಿನಿಮಾ ಥಿಯೇಟರ್ ಅದು ಕೂಡ ಒಂದು ರೀತಿಯಲ್ಲಿ ಸೋಷಿಯಲ್ ಕರಪ್ಷನ್, ಆದಕ್ಕೆ ಸಂಬಂಧವಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ಏತಕ್ಕೆ ಈ ಮಾತನ್ನ ಹೇಳುತ್ತಿದ್ದೇನೆಂದರೆ ಕರಪ್ಷನ್ ಬಿಲ್ ತಂದ ಮೇಲೆ ಜನತೆಯಲ್ಲಿರತಕ್ಕ ಭ್ರಷ್ಟತನವನ್ನು ದೂರ ಮಾಡಬೇಕು, ಇದನ್ನು ದೂರಮಾಡಲು ಎಲ್ಲ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಷೆಡ್ಯೂಲ್ 2 ಷೆಡ್ಯೂಲ್ 1 ಎಂದು ಹೇಳಿ ಎಕ್ಸ್‌ಟೆನ್‌ಷನ್ ಕೊಡುವುದಕ್ಕೆ ಪ್ರಯತ್ನ ಮಾಡಬೇಡಿ. ತಾವು ಯಾವಾಗ ಎಕ್ಸ್‌ಟೆನ್‌ಷನ್ ಕೊಡುತ್ತೀರಿ ಅದು ಒಂದು ದೃಷ್ಟಿಯಿಂದ ಭ್ರಷ್ಟತನ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಸೊಮೋಟೀವ್ 9ರ ಪ್ರಕಾರ ಯಾರು ಕಂಪ್ಲೇಂಟ್ ಕೊಡುತ್ತಾರೆ ಅದನ್ನು ಲೋಕಾಯುಕ್ತ, ಉಪ ಲೋಕಾಯುಕ್ತಕ್ಕೆ ಯಾವ ರೀತಿಯೇ ಕಂಪ್ಲೇಂಟ್ಸ್ ಬರಲಿ ಅದನ್ನು ಕಾನ್‌ಫಿಡೆನ್‌ಷಿಯಲ್ ಆಗಿ ಇಟ್ಟು ಎನ್‌ಕ್ವೈರಿ ಮಾಡಬೇಕೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಾನು ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ, ಇಂಥ ಬಿಲ್ಲನ್ನು ತಯಾರು ಮಾಡಿ ಕರಪ್ಷನ್‌ಗೆ ಯಾರು ಕಾಂಪಿಟೆಂಟ್ ಅಥಾರಿಟಿ ಇರುತ್ತಾರೋ ಅವರ ಕೈಗೆ ಕೊಟ್ಟಂತಾಗಿದೆ. ಆದ್ದರಿಂದ ಇದು ಒಂದು ಪೂರಕ ಬಿಲ್ ಅಲ್ಲ. ಈ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ ಈವತ್ತು ಸೋಮೋಟೀವ್ ತರಲಿಕ್ಕೆ ಅಧಿಕಾರವನ್ನು ಕೊಡಬೇಕು. ಇದು ಬಹಳ ಮುಖ್ಯವಾದ ವಿಷಯ. ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಿರುವುದೇನೆಂದರೆ ಈ ಬಿಲ್ ಜಾರಿಗೆ ಬಂದ ಹಿಂದಿನ ನಾಲ್ಕು ವರ್ಷಗಳ ಪ್ರಕರಣಗಳ ಬಗ್ಗೆ ಕಂಪ್ಲೇಂಟ್ ಮಾಡಬಹುದು ಎಂದು ಏನು ಲಿಮಿಟ್ ಇಟ್ಟಿದ್ದೀರಿ ಇದು ಬರೆ "ಡ್ರಾಮ" ಮಾಡುವುದಕ್ಕೋಸ್ಕರವಾಗಿ ಎಂದು ಹೇಳಬೇಕಾಗುತ್ತದೆ. 1952ನೇ ಇಸವಿಯಿಂದ ಇಲ್ಲಿಯವರೆಗೆ ಎಷ್ಟು ಮಂದಿ ಆಫೀಸರ್‌ಗಳು, ಎಷ್ಟು ಮಂದಿ ಲೆಜಿಸ್ಲೇಟರ್ಸ್ ಎಂ.ಎಲ್.ಎ., ಎಂ.ಎಲ್.ಸಿ., ಮಿನಿಸ್ಟರ್‌ಗಳು ಆಗಿ ಹೋಗಿದ್ದಾರೆ ಅವರೆಲ್ಲರೂ ಏನು ಪ್ರಾಪರ್ಟಿ ಮಾಡಿದ್ದಾರೆ ಅದೆಲ್ಲ ಲೆಕ್ಕವನ್ನು ತೆಗೆಯಬೇಕು. ಐವತ್ತೆರಡನೇ ಇಸವಿಯಿಂದ ಈ ಮೂವತ್ತು ವರ್ಷಗಳ ಕಾಲ ಯಾರು ಯಾರು ಆರಿಸಿಬಂದಿದ್ದಾರೆ, ಯಾವುದೇ ಬ್ಯಾಂಕಿನಿಂದ ಆರಿಸಿ ಬಂದಿರಲಿ, ಕೋಆಪರೇಟೀವ್ ಇನ್‌ಸ್ಟಿಟ್ಯೂಷನ್‌ನಿಂದ ಆರಿಸಿ ಬಂದಿರಲಿ, ಎಂ.ಎಲ್.ಎ., ಎಂ.ಪಿ., ಮಿನಿಸ್ಟರ್ ಇರಲಿ ಇವರೆಲ್ಲರ ಪ್ರಾಪರ್ಟಿಯನ್ನು ನೋಡಿಕೊಂಡು ಅದನ್ನು ತನಿಖೆಗೆ ಒಳಪಡಿಸುವಂಥ ಒಂದು ಬಿಲ್ಲನ್ನು ತರಬೇಕೇ ಹೊರತು ಇಂಥ ಬಿಲ್ಲನ್ನು ತಂದರೆ ಏನು ಪ್ರಯೋಜನವಾಗುವುದಿಲ್ಲ. ಆದ್ದರಿಂದ ತಾವು ಬರೆ ನಾಟಕ ಮಾಡುವಂಥ ಈ ಬಿಲ್ಲನ್ನು ತರುತ್ತಿರುವುದು ಸರಿಯಲ್ಲ. ಇದು ಒಂದು ನಿರರ್ಥಕವಾದ ಬಿಲ್ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಇದಕ್ಕೆ ಸೂಕ್ತವಾದಂಥ ಅಮೆಂಡ್‌ಮೆಂಟ್ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Ruling by the Chair

Mr. Speaker. — During the course of the debate today on the Motion for consideration of the Karnataka Lokayukta Bill 1984, Hon'ble Member Sri K. H. Ranganath raised an objection that the statement of objects and reasons, memorandum regarding delegation of Legislative powers etc., have not been appended to the English version of the bill and that such a Bill would be incomplete. He further wanted to know as to which of the versions-Kannada or English-would prevail in the Court of law. Hon'ble Minister for law and parliamentary Affairs while referring to Article 348 of the Constitution contended that the authoritative text of the English version of the bill would be valid in case of doubt, for the purpose of interpretation.

Shri M S. Krishnan was of the openion that the objection by Shri K. H. Ranganath should have been taken at the time of the introduction the bill and further wanted to know whether of the Chair would permit introduction of bills without statement of objects and reasons etc.

Rule 73 of the Rules of procedure empowers the Speaker to order the publication of a bill together with the statement of Objects and Reason etc. and Rule 79 provides for appending a statement to the bill in respect of Ordinance replacing Bill.

At the stage of introduction of a bill, all the requirements contemplated under Rule 73, 78 and 79 of our rules have to be fulfiled If at any objections is to be taken for any lapse, it should be at the introduction stage. A bill will not be either ordered for publication or permitted to be introduced for lapse of any one of the requirements.

In the present case, only a Kannada version of the bill was introduced and in fulfilled all the requirements for the purpose of this House. There was no question of any lapse in this regard. The only lacuna in the English version was that the Statement of objects and reasons etc., were not included. This could be printing mistake and morever as the Kannada Text of the Act would be translated for the purpose of interpretation and as the Bill when passed will not contain Statement of Objects and Reasons, this is not a serious lapse. Therefore, the objections of Sri K. H. Ranganath are ruled out.

ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ಜನತಾ ಸರ್ಕಾರದವರು ಈ ಲೋಕಾಯುಕ್ತ ಮಸೂದೆಯನ್ನು ಏನು ತಂದಿದ್ದಾರೆ, ಇದನ್ನು ನಾನು ನಮ್ಮ ಪಕ್ಷದ ಪರವಾಗಿ ಸ್ವಾಗತ ಮಾಡುತ್ತೇನೆ. 1978ರಲ್ಲಿ ತಂದಿದ್ದ ಲೋಕಾಯುಕ್ತ ಬಿಲ್‌ನಲ್ಲಿ ಮುಖ್ಯಮಂತ್ರಿಗಳನ್ನು ಒಳಪಡಿಸಿರಲಿಲ್ಲ. ಆದರೆ ಈ ಬಿಲ್‌ನಲ್ಲಿ ಮುಖ್ಯಮಂತ್ರಿಗಳನ್ನು ಸಹ ಸೇರಿಸಲಾಗಿದೆ. ಇದರ ಪ್ರಕಾರ ಮುಖ್ಯಮಂತ್ರಿಗಳನ್ನು ಸಹ ಆಪಾದನೆಗೆ ಗುರಿ ಮಾಡಬಹುದು. ಎರಡನೆಯ ವಿಚಾರವೆಂದರೆ, ಅರ್ಜಿ ಕೊಡುವವರು ಎರಡು ಸಾವಿರ ರೂಪಾಯಿಗಳ ಠೇವಣಿ ಕೊಡಬೇಕೆಂದರೆ. ಬಡವರಿಗೆ ಕಷ್ಟವಾಗುತ್ತದೆಂದುಕೊಂಡು ಈಗ ಇದರಲ್ಲಿ ಠೇವಣಿ ಇಡುವುದನ್ನು ಸಹ ತೆಗೆಯಲಾಗಿದೆ. ಕರಪ್ಷನ್ ಬಗ್ಗೆ ಎಲ್ಲರೂ ಹೇಳುತ್ತಾರೆ. ನಮ್ಮ ಈಗಿನ ಬಂಡವಾಳಶಾಹಿ ಪದ್ಧತಿಯಲ್ಲಿ ಕರಪ್ಷನ್ ಎಂಬುದು ಕೆಳಗಿನಿಂದ ಹಿಡಿದು ಮೇಲಿನವರೆಗೂ ಇದೆ ಈ ಕಾರಣದಿಂದ ಈ ಒಂದು ಮಸೂದೆಯನ್ನು ಪಾಸ್ ಮಾಡಿದ ಕೂಡಲೇ ಭ್ರಷ್ಟಾಚಾರ ತಪ್ಪಿಬಿಡುತ್ತದೆಂದು ಯಾರಿಗಾದರೂ ಭ್ರಮೆ ಇದ್ದರೆ ಅದು ತಪ್ಪಾಗುತ್ತದೆ. ಕೆಲವು ರಾಜ್ಯಗಳಲ್ಲಿ ಈಗಾಗಲೇ ಇಂತಹ ಮಸೂದೆ ಜಾರಿಗೆ ಬಂದಿದೆ. ಆದರೂ ಅಲ್ಲಿ ಕರಪ್ಷನ್ ಮತ್ತು ಭ್ರಷ್ಟಾಚಾರ ಕಡಿಮೆಯಾಗಿಲ್ಲ. ಬಹಳ ಜಾಸ್ತಿಯಾಗಿದೆ I would like to quote in this connection what the Governor of J & K State has said :

"Corruption is rampant in every sector of our society, private as much as public, but I speak today only of corruption within the governmental process for, given the dominent role that government play in any country, it is the values practised (rather than preached) by our masters, the elected representatives of the people, that set the tone for society as a whole."

ಇದರಲ್ಲಿ ಏನು ಹೇಳುತ್ತಾರೆಂದರೆ, ನಾವು ಯಾವ ರೀತಿ ನಮ್ಮ ಮೌಲ್ಯವನ್ನು ಎತ್ತಿ ಹಿಡಿಯುತ್ತೇವೆಯೋ ಅದರ ಮೇಲೆ ಕರಪ್ಷನ್ ಕಡಿಮೆಯಾಗುತ್ತದೆ ಎಂದು. ಆದ್ದರಿಂದ ರಾಜಕಾರಣಿಗಳ ವರ್ತನೆ ಮತ್ತು ಶಾಸಕರು ನಡೆದುಕೊಳ್ಳಬೇಕಾದ ರೀತಿಯ ಮೇಲೆ ಇದು ಹೊಂದಿಕೊಂಡಿದೆ. ನಾವು ಸರಿಯಾಗಿ ನಡೆದುಕೊಂಡರೆ ಈ ಭ್ರಷ್ಟಾಚಾರ ಸ್ವಲ್ಪಮಟ್ಟಿಗೆ ಕಡಿಮೆಯಾಗಲು ಸಾಧ್ಯವಾಗುತ್ತದೆ. ಈ ಮಸೂದೆಯಲ್ಲಿ ಅನೇಕ ನ್ಯೂನತೆಗಳಿವೆ. ಈ ಬಗ್ಗೆ ಹೊರಡಿಸಿರುವಂತಹ ಆರ್ಡಿನೆನ್ಸ್‌ನ ಅವಧಿ ಮುಗಿದು ಬಿಡುತ್ತದೆಂಬ ಕಾರಣದಿಂದ ಇದನ್ನು ಅವಸರಅವಸರವಾಗಿ ಪಾಸ್ ಮಾಡಬೇಕೆಂದಿದ್ದಾರೆ ಆದರೆ ಪಾಸ್ ಮಾಡುವ ಸಂದರ್ಭದಲ್ಲಿ ಇದರಲ್ಲಿರುವ ನ್ಯೂನತೆಗಳನ್ನು ಕೂಲಂಕುಷವಾಗಿ ವಿಚಾರ ಮಾಡಬೇಕಾಗುತ್ತದೆ. ಇಲ್ಲಿ affairs of the Government ಎಂದು ಹೇಳಿದ್ದಾರೆ affairs of the Government ಅಂದರೆ ಏನು ಎಂಬುದನ್ನು ಹೇಳಬೇಕು. ಏಕೆಂದರೆ, ಸರ್ಕಾರದ ವ್ಯವಹಾರಗಳಿಗೆ ಸಂಬಂಧ